# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **856** |
| ಉತ್ತರಿಸಬೇಕಾದ ದಿನಾಂಕ | : | 24.07.2024 |
| ಉತ್ತರಿಸಬೇಕಾದ ಸಚಿವರು | : | ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಲಬುರಗಿ ಜಿಲ್ಲೆಯ ಶಹಾಬಾದ ನಗರದಲ್ಲಿ ಕರ್ನಾಟಕ ಗೃಹ ಮಂಡಳಿ ವತಿಯಿಂದ ಅಭಿವೃದ್ಧಿಪಡಿಸಿದ 341 ನಿವೇಶನಗಳು/ಮನೆಗಳನ್ನು ವಸತಿದಾರರಿಗೆ ಈವರೆಗೆ ಹಂಚಿಕೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;</td><td>ಕಲಬುರಗಿ ಜಿಲ್ಲೆಯ ಶಹಾಬಾದ ನಗರದಲ್ಲಿ ಕರ್ನಾಟಕ ಗೃಹ ಮಂಡಳಿ ವತಿಯಿಂದ 341 ಮನೆ/ನಿವೇಶನಗಳನ್ನು ಅಭಿವೃದ್ಧಿಪಡಿಸಿದ್ದು, ಈ ಪೈಕಿ ಈಗಾಗಲೇ 231 ಮನೆ/ನಿವೇಶನಗಳನ್ನು ಹಂಚಿಕೆ ಮಾಡಲಾಗಿರುತ್ತದೆ.
<table>
<tr><th rowspan="2">Category</th><th colspan="2">Constructed</th><th colspan="2">Allotted</th><th colspan="2">Vacant</th></tr>
<tr><th>Site</th><th>House</th><th>Site</th><th>House</th><th>Site</th><th>House</th></tr>
<tr><td>EWS</td><td>80</td><td>0</td><td>57</td><td>0</td><td>23</td><td>0</td></tr>
<tr><td>LIG</td><td>58</td><td>31</td><td>39</td><td>8</td><td>19</td><td>23</td></tr>
<tr><td>MIG</td><td>120</td><td>10</td><td>93</td><td>6</td><td>27</td><td>4</td></tr>
<tr><td>HIG</td><td>42</td><td>0</td><td>28</td><td>0</td><td>14</td><td>0</td></tr>
<tr><td>TOTAL</td><td>300</td><td>41</td><td>217</td><td>14</td><td>83</td><td>27</td></tr>
</table>
</td></tr>
<tr><td>ಆ)</td><td>ಈ 341 ಜನರಲ್ಲಿ EWS, LIG ಮತ್ತು MIG ಅಂತ ಬಡವರು/ಕೆಳ ಮಧ್ಯಮ ವರ್ಗದವರಿಗೆ ವಿತರಿಸಲು ಹಣ ವೆಚ್ಚ ಮಾಡಿ, ನಿರ್ಮಿಸಿದ ಮನೆಗಳನ್ನು ಹತ್ತು ವರ್ಷದಿಂದ ಹಂಚದಿರುವುದಕ್ಕೆ ಕಾರಣಗಳೇನು ;</td><td>ಸದರಿ ಬಡಾವಣೆಯಲ್ಲಿ EWS, LIG, MIG ಮತ್ತು HIG ವರ್ಗಗಳ ಒಟ್ಟು 231 ಸ್ವತ್ತುಗಳನ್ನು ಈಗಾಗಲೇ ಮಂಡಳಿ ನಿಯಮಾನುಸಾರ ಹಂಚಿಕೆ/ಹರಾಜು ಮಾಡಲಾಗಿರುತ್ತದೆ ಹಾಗೂ ಪ್ರಸ್ತುತ ಬಾಕಿ ಉಳಿದಿರುವ ಮನೆಗಳು ಮಂಡಳಿ ಅಂತರ ಜಾಲದಲ್ಲಿ ಮೊದಲು ಬಂದವರಿಗೆ ಮೊದಲು ಆದ್ಯತೆ ಮೇರೆಗೆ ಹಂಚಿಕೆ ಪಡೆಯಲು ಸಾರ್ವಜನಿಕರಿಗೆ ಮುಕ್ತ ಅವಕಾಶವಿರುತ್ತದೆ.</td></tr>
<tr><td>ಇ)</td><td>ಶಹಾಬಾದ ನಗರದ ನಗರಸಭೆ ಅಧಿಕಾರಿಗಳು ನಾಲ್ಕು ಸರ್ವೆ ನಂಬರ್‌ಗಳಲ್ಲಿ ಒಂದು ಸರ್ವೆ ನಂಬರ್ ಮಾತ್ರ ನಮ್ಮ ವ್ಯಾಪ್ತಿಗೆ ಬರುತ್ತಿದ್ದು, ಉಳಿದವು ಬರುವುದಿಲ್ಲವೆಂದು ಬೇಜವಾಬ್ದಾರಿಯಿಂದ ಜನರಿಗೆ ಉತ್ತರಿಸುವುದು ಸರಿಯೇ ;</td><td>ದಿನಾಂಕ :04.08.2023 ರಂದು ಪೌರಾಯುಕ್ತರು, ನಗರ ಸಭೆ, ಶಹಾಬಾದ ರವರ ಅಧ್ಯಕ್ಷತೆಯಲ್ಲಿ ತಹಶೀಲ್ದಾರರು, ಶಹಾಬಾದ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಲಬುರಗಿ, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಶಹಾಬಾದ ಮತ್ತು ಸದಸ್ಯ ಕಾರ್ಯದರ್ಶಿಗಳು, ನಗರ ಯೋಜನಾ ಪ್ರಾಧಿಕಾರ, ವಾಡಿ- ಶಹಾಬಾದ ರವರು ಜಂಟಿಯಾಗಿ ಈ ವಿಷಯ ಕುರಿತು ಚರ್ಚಿಸಿದಂತೆ, ಪ್ರಸ್ತುತ ಪುರಸಭೆ ವ್ಯಾಪ್ತಿಯಿಂದ ಹೊರಗೆ ಉಳಿದಿರುವ ಸರ್ವೆ ನಂಬರುಗಳನ್ನು ಪರಿಷ್ಕೃತ-1 ಅಂತಿಮ ತಯಾರಿಸಿರುವ ಮಹಾಯೋಜನೆ ನಕ್ಷೆಯಲ್ಲಿ ಪರಿಗಣಿಸಲಾಗಿರುತ್ತದೆ ಹಾಗೂ ವಾಡಿ ಶಹಾಬಾದ ನಗರ ಯೋಜನಾ ಪ್ರಾಧಿಕಾರದಿಂದ ದಿನಾಂಕ :30.11.2017 ರಂದು ಸ್ಥಳೀಯವಾಗಿ ಅನುಮೋದಿಸಲಾಗಿದೆ ಹಾಗೂ ದಿನಾಂಕ:13.01.2009 ರಂದು ಕರ್ನಾಟಕ ಗೃಹ ಮಂಡಳಿ ನಗರ ಯೋಜನೆ ಶಾಖೆ, ಬೆಂಗಳೂರು ಇಲ್ಲಿ ಅನುಮೋದನೆಯಾಗಿದ್ದು, ಅದರಂತೆ, ಬಡಾವಣೆ ಅಭಿವೃದ್ಧಿಪಡಿಸಿ, ಸರ್ಕಾರದ ನಿಯಮಾವಳಿಗಳಂತೆ, ದಿನಾಂಕ:30.01.2015 ರಂದು ನಗರಸಭೆ ಶಹಾಬಾದ ರವರಿಗೆ ಕರ ವಸೂಲಿ ಮಾಡಲು ಹಾಗೂ ನಿರ್ವಹಣೆ ಮಾಡಲು ಹಸ್ತಾಂತರಿಸಲಾಗಿರುತ್ತದೆ.</td></tr>
</table>

<table>
<tr>
<td>ಈ)</td>
<td>ಈ ಸಮಸ್ಯೆಗಳನ್ನು ಪರಿಗಣಿಸದೆ ಅವೈಜ್ಞಾನಿಕವಾಗಿ ಮನೆಗಳನ್ನು ನಿರ್ಮಿಸಿದ ಕಲಬುರಗಿ ಕರ್ನಾಟಕ ಗೃಹ ಮಂಡಳಿ, ಈಗ ತನ್ನ ಹೊಣೆಯನ್ನು ಮರೆತು 341 ಕುಟುಂಬಗಳಿಗೆ ಇವುಗಳನ್ನು ಹಂಚದೆ ಅತಂತ್ರದಲ್ಲಿರುವುದಕ್ಕೆ ಪರಿಹಾರಗಳೇನು ;</td>
<td>ಕರ್ನಾಟಕ ಗೃಹ ಮಂಡಳಿ ವತಿಯಿಂದ ನಗರ ಯೋಜನಾ ಶಾಖೆ, ಬೆಂಗಳೂರು ವತಿಯಿಂದ ದಿನಾಂಕ:13.09.2009 ರಂದು ಅನುಮೋದನೆಯಾದ ವಿನ್ಯಾಸ ನಕ್ಷೆಯಂತೆ ಬಡಾವಣೆಯನ್ನು ಅಭಿವೃದ್ಧಿಪಡಿಸಲಾಗಿರುತ್ತದೆ. ಅನುಮೋದನೆಯಾದ ವಿನ್ಯಾಸ ನಕ್ಷೆಯಂತೆ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡಂತೆ, ಅಂದರೆ ರಸ್ತೆ, ಬೀದಿ ದೀಪ, ಒಳ ಚರಂಡಿ ವ್ಯವಸ್ಥೆ, ನೀರು ಸರಬರಾಜು ಎಲ್ಲಾ ಮೂಲಭೂತ ಸೌಲಭ್ಯಗಳೊಂದಿಗೆ ಬಡಾವಣೆಯನ್ನು ಅಭಿವೃದ್ಧಿಪಡಿಸಲಾಗಿರುತ್ತದೆ.<br><br>231 ಸ್ವತ್ತುಗಳನ್ನು ಈಗಾಗಲೇ ಮಂಡಳಿ ನಿಯಮಾನುಸಾರ ಹಂಚಿಕೆ/ಹರಾಜು ಮಾಡಲಾಗಿರುತ್ತದೆ ಹಾಗೂ ಪ್ರಸ್ತುತ ಬಾಕಿ ಉಳಿದಿರುವ ಮನೆಗಳು ಮಂಡಳಿ ಜಾಲತಾಣದಲ್ಲಿ ಮೊದಲು ಬಂದವರಿಗೆ ಮೊದಲು ಆದ್ಯತೆ ಮೇರೆಗೆ ಹಂಚಿಕೆ ಪಡೆಯಲು ಸಾರ್ವಜನಿಕರಿಗೆ ಮುಕ್ತ ಅವಕಾಶವಿರುತ್ತದೆ.</td>
</tr>
<tr>
<td>ಉ)</td>
<td>ಈ ವಿಷಯದಲ್ಲಿ ಜಿಲ್ಲಾಡಳಿತ ತನ್ನ ಜವಾಬ್ದಾರಿ ನಿರ್ವಹಿಸದೆ ನಿರ್ಲಿಪ್ತ ಧೋರಣೆ ತಳೆದ ಶಹಾಬಾದ ನಗರಸಭೆ ಮತ್ತು ಕಲಬುರಗಿ ಗೃಹ ಮಂಡಳಿ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳದಿರಲು ಕಾರಣಗಳೇನು ?</td>
<td>ಸದರಿ ಕರ್ನಾಟಕ ಗೃಹ ಮಂಡಳಿ ಬಡಾವಣೆಯಲ್ಲಿ ಬರುವ ಸರ್ವೆ ನಂಬರುಗಳು ವಿವರ ಈ ಕೆಳಕಂಡಂತ್ತಿವೆ.
<table>
<tr><th>ಕ್ರ.ಸಂ</th><th>ಸರ್ವೆ ನಂ.</th><th>ವ್ಯಾಪ್ತಿ</th></tr>
<tr><td>1</td><td>175/1</td><td>ಪುರಸಭೆ ಶಹಾಬಾದ ವ್ಯಾಪ್ತಿಗೆ ಬರುತ್ತದೆ. ಸದರಿ ಸರ್ವೆ ನಂಬರ ಜಮೀನಿನಲ್ಲಿ ಒಟ್ಟು 83 ನಿವೇಶನಗಳು ಬರುತ್ತವೆ. ಸದರಿ ನಿವೇಶನಗಳ ಬಗ್ಗೆ ಯಾವುದೇ ತೊಂದರೆ/ದೂರು ಇರುವುದಿಲ್ಲ.</td></tr>
<tr><td>2.</td><td>277/1</td><td>ಗ್ರಾಮ ಪಂಚಾಯಿತಿ ತೂನಸಳ್ಳಿ ಗ್ರಾಮ ವ್ಯಾಪ್ತಿಗೆ ಬರುತ್ತದೆ. ಸದರಿ ಸರ್ವೆ ನಂಬರಗಳ ಜಮೀನುಗಳಲ್ಲಿ ಒಟ್ಟು 217 ನಿವೇಶನಗಳು ಹಾಗೂ 41 ಮನೆಗಳು ಬರುತ್ತಿದ್ದು, ಸದರಿ ನಿವೇಶನಗಳಿಗೆ ಸರ್ಕಾರದ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸುತ್ತೋಲೆ ದಿನಾಂಕ :09.01.2015 ರಂತೆ ನಮೂನೆ-9 ಹಾಗೂ ನಮೂನೆ-IIಎ ರಡಿ ಖಾತಾ ವಿತರಿಸುವಂತೆ ಪಂಚಾಯಿತಿ ಅಧಿಕಾರಿ, ತೂನಸಳ್ಳಿ ಗ್ರಾಮ ಪಂಚಾಯಿತಿ ರವರಿಗೆ ಕೋರಲಾಗಿದೆ.</td></tr>
</table>
</td>
</tr>
</table>

ಸಂಖ್ಯೆ :ವಇ 120 ಕೆಹೆಚ್‌ಬಿ 2024

(ಬಿ.ಜೆಡ್.ಜಮೀರ್ ಅಹ್ಮದ್ ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು